ಕಾರ್ಪೊರೇಷನ್ ನೌಕರರುಗಳು ಏನು ಇದ್ದಾರೆ, ಎಲ್ಲರೂ ರಿಟ್ ಮುಖಾಂತರ ಉಚ್ಚ ನ್ಯಾಯಾಲಯಕ್ಕೆ ಹೋಗಿದ್ದರು, ಅಲ್ಲಿ ನೀವು ಸೆಮಟ್ರಲೈಸ್ಡ್ ಸರ್ವೀಸ್ ಮಾಡಿ ಎಂದು ಒಂದು ಅಭಿಪ್ರಾಯವನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ನಾವು ಕಲಂ: 9! (ಎ) ಅನ್ವಯ ಒಂದು ನಗರಪಾಲಿಕೆಯಿಂದ ಮತ್ತೊಂದು ನಗರಪಾಲಿಕೆಗೆ ವರ್ಗಾವಣೆ ಮಾಡುವಂತಹ ಅಧಿಕಾರ ಸರ್ಕಾರಕ್ಕೆ ಇದೆ. ಆದರೆ ಕೇಂದ್ರೀಕೃತ ಸೇವೆ ಪ್ರಾಧಿಕಾರವನ್ನು ರಚನೆ ಮಾಡುವಂತಹ ಒಂದು ಚಿಂತನೆ ಸರ್ಕಾರದ ಪರಿಶೀಲನೆಯಲ್ಲಿದೆ. ಆದರೆ ನಾವು ಇಲ್ಲಿ ಯಾವ ವಿಚಾರದಲ್ಲಿ ಮಾಡಬೇಕು. ಸೆಂಟ್ರಲ್ ಕೇಡರ್ ಮ್ಯಾನೇಜ್ ಮೆಂಟ್ ಅಥಾರಿಟಿ ಮುಖಾಂತರ ಮಾಡಬಹುದೇ ಇಲ್ಲವೇ ಎಂಬುದರ ಬಗ್ಗೆ ಈಗಾಗಲೇ ಲಾ ಡಿಪಾರ್ಟ್ ಮೆಂಟ್‌ನ ಅಭಿಪ್ರಾಯವನ್ನು ಕೇಳಿದ್ದೇವೆ. ಏಕೆಂದರೆ, ಪ್ರತಿ ಹಂತದಲ್ಲಿಯೂ ಕೂಡ ಈ ನೌಕರರು ಬೆಂಗಳೂರು ಬಿಟ್ಟು ಹೋಗಬಾರದು, ಮಂಗಳೂರು ಬಿಟ್ಟು ಹೋಗಬಾರದು, ಹುಬ್ಬಳ್ಳಿ ನಗರ ಬಿಟ್ಟು ಹೋಗಬಾರದು ಎಂದು ಅವರದೇ ಆದಂತಹ ದೊಡ್ಡ ಲಾಭ ಇದೆ. ಇದನ್ನು ತಡೆಗಟ್ಟಬೇಕೆಂಬುದು ನನ್ನ ಅಭಿಪ್ರಾಯವಿದೆ, ಆದಷ್ಟು ಬೇಗ ಇದಕ್ಕೆ ಒಂದು ರೂಪವನ್ನು ಕೊಡುವುದರ ಬಗ್ಗೆ ನಾನು ಸಹಾಯವನ್ನು ಮಾಡುತ್ತೇನೆ. ಮಾನ್ಯ ಯೋಗೀಶ್ ಭಟ್‌ರವರು ಕಾರ್ಪೊರೇಷನ್ ಬಗ್ಗೆ ತಾವು ಪ್ರಶ್ನೆಯನ್ನು ಕೇಳಿದರೆ ನಾನು ಹೇಳಬಹುದು. ನೀವು ಬೇರೆ ಬೇರೆ ಇಲಾಖೆಗಳ ಬಗ್ಗೆಯೂ ಈ ರೀತಿ ಮಾಡಬಹುದೆ ಎಂದು ಕೇಳುತ್ತಿದ್ದೀರಿ? ಮಾನ್ಯ ಮುಖ್ಯಮಂತ್ರಿಗಳು ನನಗೆ ಬೇರೆ ಇಲಾಖೆಗಳನ್ನು ಕೊಟ್ಟಮೇಲೆ ಅದಕ್ಕೆ ಉತ್ತರವನ್ನು ಹೇಳುತ್ತೇನೆ.

ರಾಜ್ಯದಲ್ಲಿ ವಿದ್ಯುತ್ ಸುಧಾರಣೆಗೆ ವೇಗವರ್ಧನೆ ವಿತರಣಾ ವ್ಯವಸ್ಥೆ ಪುನರ್ ರಚನೆಗೆ ಯೋಜನೆ

589 (5102) : ಶ್ರೀ ಲಕ್ಷ್ಮೀ ನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿದ್ಯುತ್ ಸುಧಾರಣೆಗೆ ವೇಗವರ್ಧನೆ ವಿತರಣಾ ವ್ಯವಸ್ಥೆ ಪುನರ್ ರಚನೆಗೆ ಯೋಜನೆ ರೂಪಿಸಲಾಗಿದೆಯೆ.

ಆ) ಈ ಯೋಜನೆಗಳು ಪ್ರಗತಿಯಲ್ಲಿವೆಯೆ ಇವುಗಳ ಅಂದಾಜು ಮೊತ್ತವೆಷ್ಟು.

ಇ) ಇವು ಯಾವಾಗ ಪೂರ್ಣಗೊಳ್ಳಲಿವೆ; ಮತ್ತು ಇದನ್ನು ರಾಜ್ಯದ ಯಾವ ಯಾವ ವಲಯಗಳಿಗೆ (ವೃತ್ತ) ವಿಸ್ತರಿಸಲಾಗುವುದು;

ಈ) ಕೇಂದ್ರದ ಸುಧಾರಣಾ ಕಾರ್ಯಕ್ರಮ ಲಾಭದಾಯಕವೆಂದು ರಾಜ್ಯ ಸರ್ಕಾರ ಪರಿಗಣಿಸಿದೆಯೆ;

ಉ) ಇದರ ಪ್ರಯೋಜನ ಪಡೆದು ಮೊದಲ ಸ್ಥಾನದಲ್ಲಿರುವ ಜಿಲ್ಲೆ ಯಾವುದು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಹೌದು.

ಆ) ಪ್ರಸ್ತುತ ಮೈಸೂರು, ಬೆಳಗಾಂ, ಬಿಜಾಪುರ ಮತ್ತು ಹುಬ್ಬಳ್ಳಿ ವೃತ್ತಗಳಲ್ಲಿ ಈ ಯೋಜನೆಯು ಪ್ರಗತಿಯಲ್ಲಿದೆ. ಇವುಗಳ ಅಂದಾಜು ಮೊತ್ತ ರೂ. 570.7 ಕೋಟಿಗಳು ಅಲ್ಲದೇ ಬೆಂಗಳೂರುನಗರ, ತುಮಕೂರು, ಕೆ.ಜಿ.ಎಫ್. ದಾವಣಗೆರೆ, ಹಾಸನ, ಮಂಗಳೂರು, ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು ಪಟ್ಟಣಗಳಲ್ಲಿ ಹಾಗೂ ಮೈಸೂರು, ಬೆಳಗಾಂ, ಬಿಜಾಪುರ ಮತ್ತು ಹುಬ್ಬಳ್ಳಿ ವೃತ್ತಗಳ

ಪಟ್ಟಣ ಪ್ರದೇಶಗಳಲ್ಲಿ ಈಗಾಗಲೇ ಮಂಜೂರಾಗಿರುವ ವಿದ್ಯುತ್ ಸ್ಮಧಾರಣಾ ಕಾಮಗಾರಿಗಳಿಗಾಗಿ ಒಟ್ಟು 740.8 ಕೋಟಿ ರೂ.ಗಳಿಗೆ ಕೇಂದ್ರ ಸರ್ಕಾರದ ಮಂಜೂರಾತಿ ದೊರೆತಿದೆ.

ಇ) ಈಗಾಗಲೇ ಮಂಜೂರಾಗಿರುವ ಕಾಮಗಾರಿಗಳನ್ನು ಪ್ರಸಕ್ತ ಸಾಲಿನಲ್ಲಿ (2003–04) ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯನ್ನು ರಾಜ್ಯದ ಇತರ ವೃತ್ತಗಳಾದ ಹಾಸನ, ಶಿವಮೊಗ್ಗ, ಮಂಗಳೂರು, ಕೋಲಾರ, ಬೆಂಗಳೂರು ಗ್ರಾಮಾಂತರ, ತುಮಕೂರು, ದಾವಣಗೆರೆ, ಗುಲ್ಬರ್ಗಾ ಹಾಗೂ ಮುನಿರಾಬಾದ್ ವೃತ್ತಗಳಿಗೂ ವಿಸ್ತರಿಸಲು ಉದ್ದೇಶಿಸಿದೆ.

ಈ) ಹೌದು.

ಉ) ಈ ಯೋಜನೆಯ ಪ್ರಯೋಜನ ಪಡೆದ ಮೊಟ್ಟ ಮೊದಲು ಜಿಲ್ಲೆ ಬಿಜಾಪುರ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಳೆದ 5–6 ವರ್ಷಗಳಿಂದಲೂ ಕೂಡ ವಿದ್ಯುತ್ ಸುಧಾರಣೆಯಾಗಬೇಕೆಂಬ ವಿಚಾರದಲ್ಲಿ ವಿದ್ಯುತ್ ಸುಧಾರಣೆ ವೇಗವರ್ಧನೆ ವಿತರಣಾ ವ್ಯವಸ್ಥೆ ಯಾವ ರೀತಿಯಾಗಿ ಮಾಡಿದ್ದೀರಿ ಎನ್ನುತಕ್ಕಂತಹ ಮಾತನ್ನು ಕೇಳಿದ್ದೇನೆ, ಅದಕ್ಕೆ 'ಹೌದು' ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಈ ಯೋಜನೆಗಾಗಿ ಸುಮಾರು 17 ಜಿಲ್ಲೆಗಳಿಗೆ ಕೇಂದ್ರ ಸರ್ಕಾರವು 1311 ಕೋಟಿ ರೂಪಾಯಿಗಳನ್ನು ಮಂಜೂರಾತಿಯನ್ನು ಕೊಟ್ಟಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಅದರ ಬಗ್ಗೆ ಯಾವ ರೀತಿ ಟೆಂಡರ್ ಕರೆದಿದ್ದಾರೆ? ಅದು ಇಲಾಖೆಯ ಕಾರ್ಯಕ್ರಮವೇ ಹೇಗೆ? 2003–04ರಲ್ಲಿ ಈ ಕಾರ್ಯಕ್ರಮವನ್ನು ಪೂರೈಸುತ್ತೇವೆ ಎನ್ನುವಂತಹ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ 1311 ಕೋಟಿ ರೂಪಾಯಿಗಳ ಯೋಜನೆಗೆ ಕೇಂದ್ರ ಸರ್ಕಾರವು ಈಗಾಗಲೇ ಮಂಜೂರಾತಿಯನ್ನು ಕೊಟ್ಟಂತಹ ಸಂದರ್ಭದಲ್ಲಿ ಕೇವಲ ಒಂದು ವರ್ಷದಲ್ಲಿ ಮುಗಿಸುವುದಕ್ಕೆ ಆಗುತ್ತದೆಯೇ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಪೂರ್ಣ ವಿವರವನ್ನು ಕೊಟ್ಟಿಲ್ಲ. ಇದರ ಬಗ್ಗೆ ವಿವರ ಕೊಡಬೇಕೆಂದು ನಾನು ಆಗ್ರಹ ಮಾಡುತ್ತಿದ್ದೇನೆ.

ಶ್ರೀ ಬಸವರಾಜ್ ಪಾಟೀಲ್ ಹುಮ್ನಾಬಾದ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರಿಗೆ ತಿಳಿಸಬೇಕಾಗಿದೆ. ಪ್ರಸ್ತುತ ಮೈಸೂರು, ಬೆಳಗಾಂ, ಬಿಜಾಪುರ ಮತ್ತು ಹುಬ್ಬಳ್ಳಿ, ವೃತ್ತಗಳಲ್ಲಿ ಅಂದಾಜು ಮೊತ್ತ 570 ಕೋಟಿ ರೂಪಾಯಿಗಳು. ಈ ವೃತ್ತದಲ್ಲಿ ಈಗಾಗಲೇ ಕೆಲಸಗಳು ಪ್ರಾರಂಭವಾಗಿವೆ ಇನ್ನು ಹಾಸನ, ಮಂಗಳೂರು ಗುಲ್ಬರ್ಗಾ, ಬೀದರ್, ರಾಯಚೂರು ಪಟ್ಟಣಗಳಲ್ಲಿ ಹಾಗೂ ಮೈಸೂರು ಬೆಳಗಾಂ, ಬಿಜಾಪುರ, ಹುಬ್ಬಳ್ಳಿ ಪಟ್ಟಣ ಪ್ರದೇಶಗಳಲ್ಲಿ ಈಗಾಗಲೇ ಮಂಜೂರಾಗಿರುವ ವಿದ್ಯುತ್ ಸುಧಾರಣಾ ಕಾಮಗಾರಿಗಳಿಗಾಗಿ ಒಟ್ಟು 740 ಕೋಟಿ ರೂಪಾಯಿಗಳಿಗೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರಕಿದೆ. ಈಗಾಗಲೇ ಈ ನಾಲ್ಕು ವೃತ್ತಗಳಲ್ಲಿ ಕೆಲಸ ಪ್ರಾರಂಭವಾಗಿದೆ. ಬಿಜಾಪುರದಲ್ಲಿ ಈ ಎಪಿಆರ್ ಟಿಸಿ ಸ್ಕೀಮ್ ನಲ್ಲಿ ಈಗಾಗಲೇ ಕೆಲಸಗಳು ಕಂಪ್ಲೀಟಾಗಿ ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆಯನ್ನೂ ಕೂಡ ಮಾಡಿದ್ದಾರೆ. ಇನ್ನು ಕೆಲವು ಇದೆ, ಉಳಿದ ಎಲ್ಲಾ ಕೆಲಸಗಳಿಗೆ ತಾವು ಹೇಳಿದ ಪ್ರಕಾರ ತನಿಖೆಯ ಬೇಸಿಸ್ ಮೇಲೆ ಟೆಂಡರ್ ನ್ನು ಕರೆಯಲಾಗಿದೆ. ಕೆಲವು ವರ್ಕ್ಸ್‌ಗಳು ಪ್ರೋಗ್ರೆಸ್‌ನಲ್ಲಿವೆ, ಆದಷ್ಟು ಬೇಗ ಟೆಂಡರ್‌ನ್ನು ಕರೆದು ತನಿಖೆಯ ಬೇಸಿಸ್ ಮೇಲೆ ಆ ಕೆಲಸವನ್ನು ಕೊಡಲಾಗುವುದು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈ ವಿದ್ಯುತ್ ಸುಧಾರಣೆ ವೇಗವರ್ಧನೆಯ ವಿತರಣಾ ವ್ಯವಸ್ಥೆ ಬಗ್ಗೆ ತಾವು ಕ್ರಮವನ್ನು ತೆಗೆದುಕೊಂಡಿದ್ದೀರೆಂದು ಹೇಳಿದ್ದೀರಿ. ಇವತ್ತು ಇದರ

ಬಗ್ಗೆ ಕೇಂದ್ರ ಸರ್ಕಾರದಿಂದ ಎಷ್ಟು ನೆರವು ಬಂದಿದೆ, ಎನ್ನುವುದರ ಬಗ್ಗೆ ಉತ್ತರವನ್ನು ಕೊಡಬೇಕು, ಟ್ರಾನ್ಸ್ ಮಿಷನ್ ಅಂಡ್ ಡಿಸ್ಟಿಬ್ಯೂಷನ್ ಲಾಸ್ ನಮ್ಮ ರಾಜ್ಯದ್ದು 38 ಪರ್ಸೆಂಟ್ ಇದೆ. ಆ ಪರ್ಸೆಂಟೇಜ್ ಏನಾದರೂ ಕಡಿಮೆಯಾಗಿದೆಯೋ ಅಥವಾ ಹೆಚ್ಚಾಗಿದೆಯೋ? ಏಕೆಂದರೆ ಇಡೀ ರಾಷ್ಟ್ರದಲ್ಲಿ ನೋಡಿದಾಗ ಅತಿ ಹೆಚ್ಚು ಟ್ರಾನ್ಸ್ ಮಿಷನ್ ಅಂಡ್ ಡಿಸ್ಟಿಬ್ಯೂಷನ್ ಲಾಸ್ ಆಗಿರುವ ರಾಜ್ಯಗಳ ಪೈಕಿ ಈ ಕರ್ನಾಟಕ ರಾಜ್ಯವು ಒಂದು. ಒಂದು ಟೈಮ್‌ನಲ್ಲಿ 7–8 ವರ್ಷಗಳ ಹಿಂದೆ. ಕೇವಲ ಟ್ರಾನ್ಸ್ ಮಿಷನ್ ಅಂಡ್ ಡಿಸ್ಟಿಬ್ಯೂಷನ್ ಲಾಸ್ ಕೇವಲ 18 ಪರ್ಸೆಂಟ್ ಇತ್ತು. ಇದರಿಂದಲೇ ಸಾವಿರಾರು ಕೋಟಿ ರೂಪಾಯಿಗಳಷ್ಟು ಕೆಪಿಟಿಸಿಎಲ್‌ಗೆ ಲಾಸ್ ಆಗುತ್ತಿದೆ. ಈ ಲಾಸ್ ಕಡಿಮೆ ಮಾಡುವುದರ ಬಗ್ಗೆ ಏನು ಕ್ರಮವನ್ನು ಕೈಗೊಂಡಿದ್ದೀರಿ?

ಶ್ರೀ ಬಸವರಾಜ್ ಪಾಟೀಲ್ ಹುಮ್ನಾಬಾದ್ : ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದ ಪ್ರಕಾರ ಈ ಎ.ಪಿ.ಡಿ.ಆರ್.ಪಿ. ಯೋಜನೆಗೆ ಕೇಂದ್ರ ಸರ್ಕಾರದಿಂದ ಶೇಕಡ 25ರಷ್ಟು ಫ್ರೀಯಾಗಿ ಕೊಡುತ್ತಾರೆ, ಶೇಕಡ 25ರಷ್ಟು ಸಾಫ್ಟ್ ಲೋನ್ ಕೊಡುತ್ತಾರೆ, ಶೇಕಡ 50ರಷ್ಟು ಆರ್.ಇ.ಸಿ.ಯಿಂದ ನಾವು ಸಾಲವನ್ನು ತೆಗೆದುಕೊಂಡು ಈ ಎ.ಪಿ.ಡಿ.ಆರ್.ಪಿ. ಯೋಜನೆಯನ್ನು ಮಾಡುವಂತಹ ಯೋಜನೆಯಿದೆ. ಇದರಲ್ಲಿ ಯಾವ್ಯಾವ ರೀತಿಯಿಂದ ಕೆಲಸ ಮಾಡಿ ಮುಗಿಸುತ್ತೇವೆ, ಈ ರೀತಿಯಾಗಿ ಮೇಲಿಂದ ಮೇಲೆ ಹಣವನ್ನು ರಿಲೀಸ್ ಮಾಡುತ್ತಿದ್ದಾರೆ. ಇನ್ನು ಟ್ರಾನ್ಸ್ ಮಿಷನ್ ಲಾಸ್ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದ ಪ್ರಕಾರ ಶೇಕಡ 38ರಷ್ಟು ಇತ್ತು; ಅದು ನಿಜ, ವಾಸ್ತವಿಕವಾಗಿ ಎಷ್ಟು ಪರ್ಸೆಂಟ್ ಇದೆ ಎಂದರೆ, ಈಗ ಕೆ.ಇ.ಆರ್.ಸಿ. ರಿಪೋರ್ಟ್ ಪ್ರಕಾರ, ಮತ್ತು ನಮ್ಮ ವರದಿಯ ಪ್ರಕಾರ ಶೇಕಡ 32, ಕೆಲವು ಕಡೆ ಶೇಕಡ 31 ಎಂದು ಹೇಳುತ್ತಿದ್ದಾರೆ. ವಾಸ್ತವಿಕವಾಗಿ 33ರಷ್ಟು ಮಾತ್ರ ಮೀಟರ್ ಅಳವಡಿಸಿದ್ದೇವೆ. ಇನ್ನು ರೈತರ ಪಂಪ್ ಸೆಟ್ ಗಳಿಗೆ ಮೀಟರ್‌ಗಳನ್ನು ಅಳವಡಿಸಿಲ್ಲ. ಇನ್ನೂ ಸಾಕಷ್ಟು ಮೀಟರ್ ಗಳನ್ನು ಅಳವಡಿಸಬೇಕಾಗಿದೆ. ಆದ್ದರಿಂದ ನಮ್ಮ ಅಂದಾಜು ಲೆಕ್ಕದ ಪ್ರಕಾರ ಶೇಕಡ 32ರಷ್ಟು ಟ್ರಾನ್ಸ್ ಮಿಷನ್ ಲಾಸ್ ಇದೆಯೆಂದು ಈಗಾಗಲೇ ಗೊತ್ತಾಗಿದೆ. ಈಗ ಬಿಜಾಪುರದಲ್ಲಿ ಎ.ಪಿ.ಡಿ.ಆರ್.ಪಿ. ಯೋಜನೆಯಲ್ಲಿ 40 ಕೋಟಿ ರೂಗಳ ಕೆಲಸ ಮಾಡಿದ್ದೇವೆ, ಆ ವರದಿಯ ಪ್ರಕಾರ ಲಾಸ್ ಕಡಿಮೆಯಾಗಿದೆ. ಹಂತ ಹಂತವಾಗಿ ಎ.ಪಿ.ಡಿ.ಆರ್.ಪಿ. ಯಿಂದ ಬರತಕ್ಕಂತಹ ಯೋಜನೆಗಳು ಇನ್ನು ಕೆಲವು ವೃತ್ತಗಳಲ್ಲಿ, ಇನ್ನು ಸುಮಾರು 1800 ರಿಂದ 2000 ಕೋಟಿ ರೂಪಾಯಿಗಳು ಈ ವರ್ಷ ವಿದ್ಯುತ್ ಲೈನ್ ಸುಧಾರಣೆಗಾಗಿ ಕೇಂದ್ರ ಸರ್ಕಾರಕ್ಕೆ ಎ.ಪಿ.ಡಿ.ಆರ್.ಪಿ.ಯಲ್ಲಿ ಪ್ರಸ್ತಾವನೆ ಕಳುಹಿಸುವಂತಹ ಯೋಜನೆಯಿದೆ. ಈ ಎಲ್ಲಾ ಕೆಲಸಗಳು ಆದನಂತರ ನಮ್ಮ ಟ್ರಾನ್ಸ್‌ಮಿಷನ್ ಲಾಸ್‌ನಲ್ಲಿ ಸ್ವಲ್ಪ ಕಡಿಮೆಯಾಗಬಹುದೆಂದು ನಾನು ಹೇಳಬಯಸುತ್ತೇನೆ.

ಗೊಂದಲ

ಅಧ್ಯಕ್ಷರು : ಶ್ರೀನಿವಾಸಗೌಡರೇ, ತಾವು ನಿಧಾನವಾಗಿ ಬಂದಿರಿ, ಅಷ್ಟರಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ನಿಂತರು. ಹಾಗಾಗಿ ಅವರಿಗೆ ಗೌರವ ಕೊಡುವ ದೃಷ್ಟಿಯಿಂದ ಅವಕಾಶಕೊಟ್ಟೆ ಈ ದಿನ ಯಾರು ಮುಖ್ಯ ಪ್ರಶ್ನೆಯನ್ನು ಕೇಳುತ್ತಾರೆ ಅವರೇ ಕೇಳಬೇಕು ಎಂದು ಇವತ್ತಿಗೆ ಮಾತ್ರ ಆ ರೀತಿ ಮೊದಲೇ ನಿರ್ಧಾರವಾಗಿದೆ. ಆದ್ದರಿಂದ, ಈಗ ನಿಮಗೆ ಅವಕಾಶ ಕೊಟ್ಟರೆ ಎಲ್ಲರಿಗೂ ಕೊಡಬೇಕಾಗುತ್ತಿದೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) : ಇದರಲ್ಲಿ ತಮ್ಮ ಕೋಲಾರ ಜಿಲ್ಲೆಯೂ ಕೂಡ ಇದೆ ಅಧ್ಯಕ್ಷರೇ, ಇದರ ಜೊತೆಗೆ ತುಮಕೂರನ್ನು ಸೇರಿಸಬೇಕೆಂದು ಕಳೆದ ವರ್ಷದಲ್ಲೇ ನಾನು ಕೇಳಿದ್ದೆ. ಆದ್ದರಿಂದ ದಯಮಾಡಿ ತಾವು ಈ ವರ್ಷವೇ ತೆಗೆದುಕೊಂಡು ನಮ್ಮ ಜಿಲ್ಲೆಯನ್ನು ಸೇರಿಸಿ ಮಾಡಬೇಕೆಂಬುದು ನಮ್ಮ ಮುಖ್ಯವಾದ ಪ್ರಶ್ನೆ, ಏಕೆಂದರೆ ಕಳೆದ ವರ್ಷಗಳಲ್ಲಿ ವಿದ್ಯುತ್ ಅಭಾವದಿಂದ ರೈತರಿಗೆ ಬಹಳ ಅನಾನುಕೂಲವಾಗಿದೆ, ಆದ್ದರಿಂದ ಇವೆರೆಡು ಜಿಲ್ಲೆಗಳ ಸೇರಿಸಿಕೊಂಡು ಅನುಕೂಲ ಮಾಡಿಕೊಡಬೇಕು. ಇದರ ಬಗ್ಗೆ ಮಂತ್ರಿಗಳು ಹೇಳಬೇಕು.

ಶ್ರೀ ಬಸವರಾಜ್ ಪಾಟೀಲ್ ಹುಮ್ನಾಬಾದ್ : ರಾಜ್ಯದ ಎಲ್ಲಾ ಭಾಗಗಳನ್ನು ಇದರಲ್ಲಿ ಸೇರಿಸಬೇಕು ಎಂದು ಈಗಾಗಲೇ ಹೇಳಿದ್ದೇನೆ. ಈಗಾಗಲೇ 2000 ಕೋಟಿ ರೂಪಾಯಿಗಳ ಹೊಸ ಯೋಜನೆಗಳು ಇವೆ. ಇದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಆದಷ್ಟು ಬೇಗ ಎರಡು ಮೂರು ತಿಂಗಳಲ್ಲಿ ಮಾನ್ಯ ಸದಸ್ಯರು ಹೇಳಿದಂತೆ ಅವರ ಭಾಗದಲ್ಲೂ ಈ ವಿದ್ಯುತ್ ವ್ಯವಸ್ಥೆ ಮಾಡುತ್ತೇವೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಿ.ಆಂಡ್ ಆರ್. ಅನ್ನು ಸರ್ಕಾರ ಅನುಮೋದಿಸುವ ಬಗ್ಗೆ

590 (5079) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಕೋರಿ ಸಿ ಅಂಡ್ ಆರ್ ಅನ್ನು ಯಾವಾಗ ಕಳುಹಿಸಲಾಗಿದೆ;

2) ಸದರಿ ವಿಚಾರದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ;

3) ಸದರಿ ಸಿ ಅಂಡ್ ಆರ್ ಗೆ ಅನುಮೋದನೆ ನೀಡುವ ವಿಚಾರದಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

1) ದಿನಾಂಕ : 28-8-2001.

2) ದಿನಾಂಕ: 3-6-2003 ರಂದು ಅನುಮೋದನೆ ನೀಡಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ತಿಳಿಸಲಾಗಿದೆ.

3) ಅನ್ವಯಿಸುವುದಿಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಗರಾಭಿವೃದ್ಧಿ ಸಚಿವರಲ್ಲಿ ಒಂದು ಅರಿಕೆ ಏನೆಂದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ತನ್ನ ಶತಮಾನೋತ್ಸವವನ್ನು ಆಚರಿಸುವ ದಿಕ್ಕಿನಲ್ಲಿ ಕಾರ್ಯೋನ್ಮುಖವಾಗುತ್ತಿದೆ. ಅಲ್ಲಿ ಕೆಲಸ ಮಾಡುತ್ತಿರುವಂತಹ ಸುಮಾರು 250 ಕುಟುಂಬಗಳಿಗೆ ಸರ್ಕಾರದ ಸಿ.ಆಂಡ್ ಆರ್. ರೂಲ್ಸ್ ಪ್ರಕಾರ ಕೊಡಬೇಕಾದಂತಹ ಸೌಲಭ್ಯಗಳನ್ನು ಕೊಡಲಿಲ್ಲ. ನಾನು ಒಬ್ಬ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯನಾಗಿ ಕೇಳುತ್ತಿದ್ದೇನೆ, ಪ್ರಾಮಾಣಿಕವಾಗಿ ಕಷ್ಟದಲ್ಲಿರುವವರು, ಬಹಳ ಜನ ಇದ್ದಾರೆ, ಸಾಲ ಮಾಡಿಕೊಂಡಿದ್ದಾರೆ, ಮನೆ ಮಾರಿಕೊಂಡಿದ್ದಾರೆ ಬಹಳ ಕಷ್ಟದಲ್ಲಿದ್ದಾರೆ, ಅವರಿಗೆ ಸರ್ಕಾರದಿಂದ ಸಲ್ಲಬೇಕಾದಂಥ ಎಲ್ಲಾ ಸೌಲಭ್ಯಗಳನ್ನು ಕೊಟ್ಟು ಅವರಿಗೆ ಅಭಯಹಸ್ತವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.